**EX** 17/2022 **CW** –1

**ದಿಃ16.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 4 ನೇ ಜೆಡಿಆರ ಪರ ವಕೀಲರಾದ ಶ್ರೀ ಎಸ ಎನ ವೈ ವಕೀಲರಿಂದ**

ನನ್ನ ವಿದ್ಯಾಭ್ಯಾಸ ಬಿಎಸಸಿಯವರೆಗೆ ಆಗಿರುತ್ತದೆ. ನಾನು ಸದರಿ ಇಲಾಖೆಗೆ ಪಿಯುಸಿ ವಿದ್ಯಾಭ್ಯಾಸದ ಆಧಾರದ ಮೇಲೆ ನೇಮಕವಾಗಿರುತ್ತೇನೆ. ಎ.ಡಿ.ಎಲ್.ಆರ್ ಕಚೇರಿಯಲ್ಲಿ ಒಟ್ಟು 7 ಮಂದಿ ಸರ್ವೆಯರ್ ಇರುತ್ತಾರೆ. ನಾನು ಬೇರೆ ಊರಿನಲ್ಲಿಯೂ ಕೂಡಾ ಸರ್ವೆಯರ ಆಗಿ ಕೆಲಸ ನಿರ್ವಹಿಸಿರುತ್ತೇನೆ. ಎ.ಡಿ.ಎಲ್.ಆರ್ ರವರು ನಮ್ಮ ಮೇಲಾಧಿಕಾರಿಗಳು ಎಂದರೆ ಸರಿ. ನ್ಯಾಯಾಲಯದಿಂದ ಬಂದಂತಹ ಕಮೀಷನರ್

ವಾರೆಂಟ್ ನಲ್ಲಿ ಯಾರಿಗೆ ವಾರೆಂಟ ಬಂದಿದೆ ಎಂದು ಹೇಳುತ್ತೀರಾ ಎಂದರೆ ಸಾಕ್ಷಿ ಎ.ಡಿ.ಎಲ್.ಆರ್ ಸಿಟಿ ಸರ್ವೆಯರ್ ಹುಬ್ಬಳ್ಳಿ ಎಂದು ನುಡಿಯುತ್ತಾರೆ. ವಾರೆಂಟನ ಹಿಂಭಾಗದಲ್ಲಿ ಸಹಿ ಇದೆ ಅದು ತಮ್ಮದಾ ಎಂದರೆ ಸಾಕ್ಷಿ ಅಲ್ಲ ಎನ್ನುತ್ತಾರೆ. ಸದರಿ ವಾರೆಂಟ ಪ್ರಕಾರ ಎ.ಡಿ.ಎಲ್.ಆರ್ ಸಿಟಿ ಸರ್ವೆಯರ್ ಹುಬ್ಬಳ್ಳಿಗೆ address ಮಾಡಲಾಗಿದೆ ಎಂದರೆ ಸರಿ. ಸದರಿ ವಾರೆಂಟ ಸಿಟಿ ಸರ್ವೆಯರ್ ಇವರಿಗೆ ಪ್ರತ್ಯೇಕವಾಗಿ address ಆಗಿಲ್ಲವೆಂದರೆ ಸರಿ. ಸದರಿ ವಾರೆಂಟನ್ನು ತಾವು ತಮ್ಮ ಮೇಲಾಧಿಕಾರಿಗಳಿಂದ ಎಂದು ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿ ಪಡೆದುಕೊಂಡ ಬಗ್ಗೆ ದಿನಾಂಕ ನಮೂದು ಇಲ್ಲ ಎನ್ನುತ್ತಾರೆ. ನಮ್ಮ ಇಲಾಖೆಯಲ್ಲಿ ಆವಕ-ಜಾವಕ ಪುಸ್ತಕವನ್ನು ಮೆಂಟೆನ ಮಾಡುತ್ತಾರೆಂದರೆ ಸರಿ. ನ್ಯಾಯಾಲಯದಿಂದ ಕಮೀಷನ ವಾರೆಂಟ ಬಂದ ಮೇಲೆ ನಿಮ್ಮ ಇಲಾಖೆಯಲ್ಲಿ ಆವಕ-ಜಾವಕ ಪುಸ್ತಕದಲ್ಲಿ ಅದು ಎಂಟ್ರಿ ಆದ ಬಗ್ಗೆ ನೀವು ನೋಡಿದ್ದೀರಾ ಎಂದರೆ ಸಾಕ್ಷಿ ನಾನು ನೋಡಿಲ್ಲ ಎನ್ನುತ್ತಾರೆ. ಈಗ ನಾನು ನ್ಯಾಯಾಲಯದಲ್ಲಿ ವಾರೆಂಟ ನೋಡಿದ್ದು ಇದಕ್ಕಿಂತ ಮೊದಲು ಸದರಿ ವಾರೆಂಟ ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಇಲಾಖೆಯಲ್ಲಿ ಇದಕ್ಕಿಂತ ಮೊದಲು ಎ.ಡಿ.ಎಲ್.ಆರ್ ಎಂದು ಯಾರು ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ತನ್ವೀನ ಡಾಂಗೆ ಎನ್ನುವವರು ಎಂದು ನುಡಿಯುತ್ತಾರೆ. ನ್ಯಾಯಾಲಯದಿಂದ ವಾರೆಂಟನ್ನು ಎ.ಡಿ.ಎಲ್.ಆರ್ ಇವರಿಗೆ ನೀಡಿದ್ದು ನಂತರ ಅವರು ಆ ಕೆಲಸವನ್ನು ಬೇರೆಯವರಿಗೆ entrust ಮಾಡಿದ ಪ್ರತ್ಯೇಕವಾದ ಆದೇಶ ಇದೆ ಎಂದು ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿಲ್ಲ ಎನ್ನುತ್ತಾರೆ. ಎ.ಡಿ.ಎಲ್.ಆರ್ ರವರನ್ನು ಬಿಟ್ಟು ಬೇರೆ ಯಾರು ಈ ಕೆಲಸ ಮಾಡಿದರು ಅದು ಅವರ ಕಾರ್ಯವ್ಯಾಪ್ತಿ ಮೀರಿದ ಕೆಲಸವಾಗುತ್ತದೆ ಇದರ ಬಗ್ಗೆ ನಿಮಗೆ ತಿಳುವಳಿಕೆ ಇದೇಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನನ್ನ ಕಾರ್ಯವ್ಯಾಪ್ತಿಯನ್ನು ಮೀರಿ ನಾನು ಕೆಲಸ ಮಾಡಿರುತ್ತೇನೆಂದರೆ ಸಾಕ್ಷಿ ಮಾಡಿಲ್ಲ ಎನ್ನುತ್ತಾರೆ. ನನಗೆ Karnataka Land Revenue ನೀತಿ ನಿಯಮಗಳ ಬಗ್ಗೆ ತಿಳುವಳಿಕೆ ಇದೇಯಾ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ಖಾಸಗಿ ವ್ಯಕ್ತಿಗಳು ಸಂಬಂಧ ಮೋಜಣಿ ಕಾರ್ಯ ನಿರ್ವಹಿಸಬೇಕಾದರೆ ಅವರು ಚಲನ್ ತುಂಬಬೇಕಾಗುತ್ತದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನ್ಯಾಯಾಲಯದ ಆದೇಶದ ಪ್ರಕಾರ ಮೋಜಣಿ ಮಾಡಬೇಕಾದರೆ ಸದರಿ ಚಲನ್ ತುಂಬಬೇಕಾಗುತ್ತದೋ ಇಲ್ಲವೋ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನ್ಯಾಯಾಲಯದ ಆದೇಶದ ನಂತರ

ದಾಖಲೆಗಳನ್ನು ಹೇಗೆ ಪಡೆದೀರಿ ಎಂದರೆ ಸಾಕ್ಷಿ ನ್ಯಾಯಾಲಯದ ಕಚೇರಿಯಿಂದ ನಾನೇ ಪಡೆದಿರುತ್ತೇನೆ ಎನ್ನುತ್ತಾರೆ. ವಾರೆಂಟನಲ್ಲಿ ದಾಖಲೆಗಳನ್ನು ಪಡೆದ ಬಗ್ಗೆ ನಿಮ್ಮದು ಹಿಂಬರಹ ಇದೇಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನ್ಯಾಯಾಲಯದಿಂದ ದಾಖಲೆಗಳನ್ನು ಪಡೆದುಕೊಳ್ಳುವ ಕಾಲಕ್ಕೆ ನಿಮ್ಮ ಸಹಿಯನ್ನು ಕಚೇರಿಯವರು ಪಡೆದ ಬಗ್ಗೆ ನಮೂದು ಇದೇಯಾ ಎಂದರೆ ಸಾಕ್ಷಿ ನಮೂದು ಇಲ್ಲ ಸಾಕ್ಷಿ ಮುಂದುವರೆದು ಕಚೇರಿಯಲ್ಲಿ ಪಡೆದು ನಾನೇ ಜರಾಕ್ಸ ಮಾಡಿಕೊಂಡಿರುತ್ತೇನೆ ಎನ್ನುತ್ತಾರೆ. ಸದರಿ ಜರಾಕ್ಸ ದಾಖಲೆಗಳನ್ನು ನ್ಯಾಯಾಲಯಕ್ಕೆ ಮರಳಿ ಕೊಟ್ಟ ಬಗ್ಗೆ ದಾಖಲೆ ಇದೇಯಾ ಎಂದರೆ ಸಾಕ್ಷಿ ನಾನು ಕೊಟ್ಟಿಲ್ಲ ಅವು ನನ್ನ ಬಳಿ ಇವೆ ಎನ್ನುತ್ತಾರೆ. ನಾನು ನೋಟೀಸ ಕಳುಹಿಸಿದ ಬಗ್ಗೆ ಅವು ಪಕ್ಷಗಾರರಿಗೆ ತಲುಪಿ ಸ್ವೀಕೃತಿ ಪತ್ರ ಬಂದ ಬಗ್ಗೆ ಅವುಗಳನ್ನು ವರದಿಯಲ್ಲಿ ಲಗತ್ತಿಸಿದ್ದೀರಾ ಎಂದರೆ ಸಾಕ್ಷಿ ಸ್ವೀಕೃತಿ ಪತ್ರ ಬಂದಿಲ್ಲ ಎನ್ನುತ್ತಾರೆ. ಸದರಿ ನೋಟೀಸಗಳು ಪಕ್ಷಗಾರರಿಗೆ ಜಾರಿಯಾಗಿದೇಯೋ ಇಲ್ಲವೋ ಎನ್ನುವುದರ ಬಗ್ಗೆ ನೀವು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೊಂದಣಿ ಅಂಚೆ ಮೂಲಕ ನೋಟೀಸ ಕಳುಹಿಸಿದ ಮೇಲೆ ನಾನು 7 ದಿನಗಳವರೆಗೆ ಕಾಯಬೇಕಾಗುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅಳತೆ ಮಾಡುವ ಜಾಗ ನಿಲಿಂಜನ ರೋಡ ಹುಬ್ಬಳ್ಳಿಯ  ಹೃದಯ ಭಾಗದಲ್ಲಿರುವಂತಹ ಆಸ್ತಿ ಎಂದರೆ ಸರಿ. ಸದರಿ ಆಸ್ತಿ 1 ವರೆ ಎಕರೆ ವಿಸ್ತೀರ್ಣ ಇರುತ್ತದೆ ಎಂದರೆ ಸಾಕ್ಷಿ  4,713.4 ಸ್ಕ್ವೇರ್ ಯಾರ್ಡ ಇದೆ ಎನ್ನುತ್ತಾರೆ. ಸಾಕ್ಷಿ ಅದನ್ನು ಅಳತೆ ಮಾಡಿ 38 ಗುಂಟೆ 15 ಆಣೆ ಇದೆ ಎನ್ನುತ್ತಾರೆ. 1 ಎಕರೆಗೆ 1 ಗುಂಟೆ 1 ಆಣೆ ಕಡಿಮೆ ಎಂದು ನುಡಿಯುತ್ತಾರೆ. ನಮ್ಮ ಸರ್ವೆ ದಾಖಲೆ ಪ್ರಕಾರ ಮೂಲತಃ 8,349 ಸ್ಕ್ವೇರ್ ಯಾರ್ಡ ಇತ್ತು ಎನ್ನುತ್ತಾರೆ. ಅಂದರೆ 1 ಎಕರೆ 28 ಗುಂಟೆ 15 ಆಣೆ ಎನ್ನುತ್ತಾರೆ. ಸದರಿ ಆಸ್ತಿ ಒಂದುವರೆ ಎಕರೆಗಿಂತ ಜಾಸ್ತಿ ಎಂದರೆ ಸರಿ. ಸಿಟಿಎಸ ನಂಬರ 170 ರೂಲ್ ಕಾರ್ಡ ನೋಡಿದಾಗ ಸಾಕಷ್ಟು ಡಿವಿಜನ್ ಗಳು ಆಗಿವೆ ಎಂದರೆ ಸರಿ. ಈ ಡಿವಿಜನಗಳು ಕೆಲವೊಂದು ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ, ಸೇಲ್ ಡಿಡ್ ಪ್ರಕಾರ, gift deed ಪ್ರಕಾರ ಹಾಗೂ partition ಪ್ರಕಾರ ಆಗಿದ್ದವು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸಿಟಿಎಸ ನಂಬರ 170 ರೂಲ್ ಕಾರ್ಡ ಪ್ರಕಾರ ಸಿಟಿಎಸ ನಂಬರ 170 ಎ ರಿಂದ ಇ ವರೆಗೆ ಇದೆ ಎಂದರೆ ಸರಿ. ರೂಲ್ ಕಾರ್ಡ ಗಳನ್ನು ತಾವು ಯಾವಾಗ ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿ ನಾವು ವಾರ್ಡವಾಯ್ಸು independent ಸರ್ವೆಯರ್ ಆಗಿದ್ದು ಆ ವಾರ್ಡಗೆ ಸಂಬಂಧಿಸಿದ ಆ ದಾಖಲೆ ನಮ್ಮ



ಬಳಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ರೂಲ್ ಕಾರ್ಡಗಳನ್ನು ಯಾವ ದಿನಾಂಕದಂದು ಪಡೆದುಕೊಂಡೆವು ಎಂದು ನಮೂದು ಮಾಡಿಲ್ಲವೆಂದರೆ ಸಾಕ್ಷಿ ಅದು ನಮೂದು ಇರುವುದಿಲ್ಲ

ಎನ್ನುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಆಸ್ತಿಗಳು ಭಾಗವಾಗಿದ್ದವು ಎಂದರೆ ಸಾಕ್ಷಿ ಅದನ್ನು ರೂಲ್ ಕಾರ್ಡನಲ್ಲಿ ನಮೂದು ಮಾಡಿಲ್ಲ ಕೇವಲ ವಾಟ್ನಿ ಹಾಗೂ ವಹಿವಾಟಿನಂತೆ ಭಾಗವಾಗಿದೆ ಎಂದು ಬರೆಯಲಾಗಿದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ದಿಃ09-12-2016 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಡಿಕ್ರಿಯಂತೆ ಹೆಸರು ದಾಖಲು ಎಂಬುವುದಾಗಿ ನಮೂದು ಇದೆ ಎನ್ನುತ್ತಾರೆ. ಸದರಿ ರೂಲ್ ಕಾರ್ಡನಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ಆದ ರಾಜಿ ಡಿಕ್ರಿ ಪ್ರಕಾರ ಜೆಡಿಆರ ನಂಬರ 1 ರಿಂದ 3 ಇವರ ಹೆಸರು ನಮೂದು ಇದೆ ಎಂದು ಬರೆದಿದ್ದಾರೆಂದು ಸಾಕ್ಷಿ ನುಡಿಯುತ್ತಾರೆ. ಸದರಿ ಬರವಣಿಗೆ ಮೊದಲೇ ಆಗಿದ್ದು ಇರುತ್ತದೆ. ನೀವು ಆಯೋಜಕರ ಕೆಲಸ ನಿರ್ವಹಿಸುವ ಸಮಯದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ಆದ ರಾಜಿ ಡಿಕ್ರಿ ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿದ್ದೇನೆ ಎನ್ನುತ್ತಾರೆ. ಆ ಕಡತಗಳು ನಿಮ್ಮಲ್ಲಿ ಇದೇಯಾ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ಸಾಕ್ಷಿ ತಮ್ಮ ಕಡತವನ್ನು ಪರಶೀಲನೆ ಮಾಡಿ ರಾಜಿ ಡಿಕ್ರಿ ಇದೆ ಆದರೆ ಮ್ಯಾಪ ಇಲ್ಲ ಎನ್ನುತ್ತಾರೆ. ರಾಜಿ ಡಿಕ್ರಿ ಆದ ನಂತರ ಜೆಡಿಆರ ನಂಬರ 1 ರಿಂದ 3 ಇವರು ಕೆಲವೊಂದು correspondence ಗಳನ್ನು ಸುಭಾಷ ಮಡಿಮಣ್ಣ ಇವರ ಜೊತೆ ಮಾಡಿದಿತ್ತು ಆ ಬಗ್ಗೆ ದಾಖಲೆ ಇದೇಯಾ ನೋಡಿ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಅವುಗಳನ್ನು ನಿಮ್ಮ ಕಡತದಲ್ಲಿ ಅಂದರೆ ಕಚೇರಿಯ ಕಡತದಲ್ಲಿ ಇದೇಯಾ ಎಂದರೆ ಸಾಕ್ಷಿ ಪರಿಶೀಲನೆ ಮಾಡಬೇಕು ಎನ್ನುತ್ತಾರೆ. ಸದರಿ ಕಡತಗಳನ್ನು ಪರಿಶೀಲನೆ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಲು ಆಗುತ್ತದೇಯಾ ಎಂದರೆ ಸಾಕ್ಷಿ ಕಾಲಾವಕಾಶ ಕೊಟ್ಟರೆ ಮಾಡುತ್ತೇನೆ ಎನ್ನುತ್ತಾರೆ. ಅಳತೆ ಮಾಡಿದ ಜಾಗಗಳ ಆಜು-ಬಾಜು ಸರ್ವೆ ನಂಬರಗಳನ್ನು ನಾನು ನನ್ನ ನಕಾಶೆಯಲ್ಲಿ ನಮೂದು ಮಾಡಿಲ್ಲವೆಂದರೆ ಸಾಕ್ಷಿ ಮಾಡಿಲ್ಲ ಎನ್ನುತ್ತಾರೆ. ನೀವು ಅಳತೆ ಕಾರ್ಯಕ್ಕೆ ಹೋದಾಗ ನಿಮ್ಮ ಕಚೇರಿಯಿಂದ ಹೆಚ್ಚುವರಿ ಸಿಬ್ಬಂದಿಗಳನ್ನು ಕರೆದುಕೊಂಡು ಹೋಗಿದ್ದೀರಿ ಎಂದರೆ ಸಾಕ್ಷಿ ಒಬ್ಬರನ್ನು ಅಂದರೆ ಎಂ.ಎಂ.ಕುಸಗಲ್ಲ ಜವಾನ ಅನ್ನುವವರನ್ನು ಕರೆದುಕೊಂಡು ಹೋಗಿದ್ದೆ ಎನ್ನುತ್ತಾರೆ. ನಾನು ನನ್ನ ವರದಿಯಲ್ಲಿ ಸದರಿಯವರನ್ನು ಕರೆದುಕೊಂಡು ಹೋದ ಬಗ್ಗೆ ನಮೂದು ಮಾಡಿಲ್ಲವೆಂದರೆ ಸರಿ, ಅದೇ ರೀತಿ ಸದರಿ ಆಸ್ತಿಯನ್ನು ಹೇಗೆ ಅಳತೆ ಮಾಡಿದೆ



ಎನ್ನುವ ಬಗ್ಗೆ ನನ್ನ ವರದಿಯಲ್ಲಿ ಬರೆದಿಲ್ಲವೆಂದರೆ ಸಾಕ್ಷಿ ಬರೆದಿಲ್ಲ ಎನ್ನುತ್ತಾರೆ. ನಾನು ನನ್ನ ವರದಿಯಲ್ಲಿ ಅರ್ಜಿದಾರರು ಕೊಟ್ಟಂತಹ Memo of Instruction ಬಗ್ಗೆ ಉತ್ತರ ಕೊಟ್ಟಿದ್ದನ್ನು ನಮೂದು ಮಾಡಿಲ್ಲವೆಂದರೆ ಸಾಕ್ಷಿ ಮಾಡಿಲ್ಲ ಎನ್ನುತ್ತಾರೆ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ